**ಅಸಲು ದಾವಾ ನಂಃ 67/2022**
**ಪಿ.ಡಬ್ಲ್ಯೂಃ 3,**

**ದಿನಾಂಕ :08-04-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಆರ್. ಎಚ್. ಆರ್. ಪ್ರತಿವಾದಿ ಪರ ವಕೀಲರಿಂದ :**

1 ನೇ ಪ್ರತಿವಾದಿಯ ಅಣ್ಣ ಬಸವರಾಜ ಕೊಡದೂರ ಗ್ರಾಮದಲ್ಲಿ ಹುಟ್ಟಿದ್ದಾನೆ, ಅವರು ಗುಲಬರ್ಗಾದಲ್ಲಿ ತೀರಿ ಹೋಗಿದ್ದಾರೆ. ಶಕುಂತಲಾ ಮತ್ತು ಬಸವರಾಜ ಇವರ ಮದುವೆ 2005 ರಲ್ಲಿ ಆಗಿದೆ. ನೀಲಮ್ಮ ಇವರು ಗುಲಬರ್ಗಾದಲ್ಲಿ ತೀರಿ ಹೋಗಿದ್ದಾರೆ. ಬಸವರಾಜ ಆಗಲಿ, ನೀಲಮ್ಮ ಆಗಲಿ ಎಂದು ಕೊಡದೂರ ಗ್ರಾಮದಲ್ಲಿ ವಾಸ ಇಲ್ಲಾ ಎಂದರೆ ಸಾಕ್ಷಿ ಅವರು ಅಲ್ಲೇ ಹುಟ್ಟಿ ಬೆಳೆದು ನಂತರ ಗುಲಬರ್ಗಾದಲ್ಲಿ ಬಂದು ನೆಲೆಸಿದ್ದಾರೆ ಎಂದು ನುಡಿಯುತ್ತಾರೆ. ನೀಲಮ್ಮ, ಬಸವರಾಜ, ವಾದಿ ನಂ-1 ಇವರು ಕೊಡದೂರದಲ್ಲಿ 20-30 ವರ್ಷ ಇದ್ದರು. ನಂತರ ನೀಲಮ್ಮನ ಗಂಡನು ಹೊಡೆ ಬಡೆ ಮಾಡಿ ಕಾರಣ ನೀಲಮ್ಮ ಇವರು ತನ್ನ ಮಕ್ಕಳೊಂದಿಗೆ ಗುಲಬರ್ಗಾಕ್ಕೆ ಬಂದು ನೆಲೆಸಿದಳು. 1 ನೇ ಪ್ರತಿವಾದಿ ಮತ್ತು ಶಿವರಾಯ ಇವರು ಮದುವೆ ಆದ ಬಗ್ಗೆ ನಾನು ಕೇಳಿಲ್ಲಾ. ನೀಲಮ್ಮ ಮತ್ತು ಶಿವರಾಯ ಇವರ ಮದುವೆ ಯಾವಾಗ ಆಯಿತು ಎಂದು ಗೊತ್ತಿಲ್ಲಾ. ವಾದಿ ನಂ-2 ಇವರು ತನ್ನ ತಂದೆಯ ಜೊತೆಗೆ ಕಲಬುರಿಗಿಯ ತಾರಫೈಲ ಬಡಾವಣೆಯಲ್ಲಿ ವಾಸ ಇದ್ದರು. 2 ನೇ ವಾದಿ ಶಾಲೆ ಕಲಿತಿಲ್ಲಾ. 2 ನೇ ವಾದಿಯನ್ನು ನಾವೇ ಇಟ್ಟುಕೊಂಡಿದ್ದೇವೆ. 2 ನೇ ವಾದಿಯ ತಂದೆ ತೀರಿ ಹೋದ ನಂತರ ನಮ್ಮ ಬಳಿ ಇದ್ದಾರೆ. ನಾನು ಕಲಬುರಗಿಯಲ್ಲಿ ಇರುತ್ತೇನೆ. ವಾದಿ ನಂ-1 ಮತ್ತು 2, ಮೃತ ಬಸವರಾಜ ಮತ್ತು ನೀಲಮ್ಮ ಎಂದಿಗೂ ಕೊಡದೂರ ಗ್ರಾಮದಲ್ಲಿ ವಾಸ ಇಲ್ಲಾ ಎಂದರೆ ಸರಿಯಲ್ಲ. ನೀಲಮ್ಮ ಇವಳು ಶಿವರಾಯನ ಹೆಂಡತಿ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾತ್ರ ಶಿವರಾಯನ ಲಗ್ನದ ಕಾನೂನು ರೀತಿ ಹೆಂಡತಿ ಎಂದರೆ ಸರಿಯಲ್ಲ. ಶಿವರಾಯ ಇತನ ಜೀವತ ಅವಧಿಯಲ್ಲಿ 1 ನೇ ಪ್ರತಿವಾದಿಯನ್ನು ಮಾತ್ರ ಮದುವೆ ಮಾಡಿಕೊಂಡಿದ್ದಾನೆ ಎಂದರೆ ಸರಿಯಲ್ಲ. ವಾದಿಯರು ಮತ್ತು ನೀಲಮ್ಮ ಮತ್ತು ಬಸವರಾಜ ಇವರು ಶಿವರಾಯನಿಗೆ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. 2 ನೇ ವಾದಿಗೆ 17 ವರ್ಷ. ದಾವೆಯನ್ನು ಸಲ್ಲಿಸಲು ಸುಳ್ಳು ಸಾಕ್ಷಿ ಸೃಷ್ಟಿಸಿ ಈ ದಾವೆಯನ್ನು ಸಲ್ಲಿಸಲು ನಾನೇ ಮೂಲ ಕಾರಣ ಎಂದರೆ ಸರಿಯಲ್ಲ .

ಅಸಲು ದಾವಾ ನಂಃ **67/2022**
ಪಿ.ಡಬ್ಲ್ಯೂಃ 3,

ನನಗೆ ಶಿವರಾಯ ಮತ್ತು 1 ನೇ ಪ್ರತಿವಾದಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ವಾದಿಯರು, ನೀಲಮ್ಮ ಮತ್ತು ಬಸವರಾಜ ಬಗ್ಗೆ ಯಾವುದೇ ಮಾಹಿತಿ ಇಲ್ಲಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ನೀಲಮ್ಮ ಮತ್ತು ಬಸವರಾಜ ಕೊಡದೂರ ಗ್ರಾಮದಲ್ಲಿ ಇದ್ದರು ಅಂತಾ ರೇಶನ ಕಾರ್ಡ ಇದೆ. ಸದರಿ ರೇಶನ ಕಾರ್ಡನ್ನು ನಾನು ನೋಡಿದ್ದೇನೆ. ನಾನು 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ವಾದಿಯರನ್ನು ಪುಸಲಾಯಿಸಿ ಅವರ ಕಡೆಯಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ : ಇಲ್ಲಾ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**